ಲೇಖನ 06

ಬಣ್ಣ ಬದಲಿಸುವ ಉಸರವಳ್ಳಿ

ಸ್ನೇಹಿತರೇ, ನಾವು ನಮ್ಮ ನಿಜ ಜೀವನದಲ್ಲಿ ಎಲ್ಲ ತರಹದ ಜನರನ್ನು ನೋಡಿದ್ದೇವೆ. ಆದರೆ, ಮನುಷ್ಯನ ಧರ್ಮ ಒಂದು ಸ್ವಾರ್ಥ ಜೀವನದ ಧರ್ಮ. ಮನುಷ್ಯರು ಅವಶ್ಯಕ್ಕೆ ತಕ್ಕಂತೆ ಸಂಬಂಧಗಳನ್ನು ಬೆಳೆಸಿಕೊಂಡು ಬೇಡವಾದಾಗ ಸಂಬಂಧವನ್ನು ಕಳೆದುಕೊಳ್ಳುತ್ತಾರೆ.

ಒಬ್ಬ ಮನುಷ್ಯ ಸಂತೋಷದಲ್ಲಿ ಇದ್ದಾಗ ಅವನ ಸಂತೋಷದಲ್ಲಿ ಭಾಗಿಯಾಗಿ ಅವನು ಕಷ್ಟದಲ್ಲಿದ್ದಾಗ ಬಣ್ಣದ ಮಾತುಗಳನ್ನಾಡುತ್ತಾ ದೂರವಾಗುತ್ತಾರೆ. ಹೀಗೆ ಬಣ್ಣದ ಮಾತುಗಳನ್ನಾಡುತ್ತಾ ದೂರವಾಗುವವರನ್ನು ನಾವು ಉಸರವಳ್ಳಿಯ ತರ ಬಣ್ಣ ಬದಲಿಸುವ ಜನ ಎಂದು ಕರೆಯುತ್ತೇವೆ.

ಸ್ನೇಹಿತರೇ, ಹೌದು ನಾವು ಉಸರವಳ್ಳಿ ಜನ, ಉಸರವಳ್ಳಿ ಜನಿ ಎಂದು ಕರೆಯುತ್ತೇವೆ. ನಿಮಗೆ ಉಸರವಳ್ಳಿ ಎಂದರೇನು ಗೊತ್ತೆ ? ಇದರ ಬಗ್ಗೆ ಎಲ್ಲಾದರೂ ಕೇಳಿದ್ದೀರಾ? ನೋಡಿದ್ದೀರಾ? ಹಾಗಾದರೆ ಬನ್ನಿ, ಈ ಉಸರವಳ್ಳಿಯ ಬಗ್ಗೆ ವಿವರವಾಗಿ ತಿಳಿಸುತ್ತೇನೆ.

ಚಿತ್ರ ಕೃಪೆ: ಅಭಿಷೇಕ್ ಗುರುದತ್

ಸ್ನೇಹಿತರೇ, ಉಸರವಳ್ಳಿ ಎನ್ನುವುದು ಸರೀಸೃಪಗಳ ಜಾತಿಗೆ ಸೇರಿದ ಒಂದು ಪ್ರಾಣಿ. ಇದರ ಸಾಮಾನ್ಯ ನಾಮ ಉಸರವಳ್ಳಿ ಅಥವಾ ಗೋಸುಂಬೆ. ಇವು ತಮ್ಮ ದೇಹವನ್ನು ತೆವಳುವುದರಿಂದ, Reptilia ವರ್ಗಕ್ಕೆ ಸೇರಿಸಿದ್ದಾರೆ. ಇವು ಶೀತ ರಕ್ತದ ಭೂವಾಸಿ ಪ್ರಾಣಿಗಳು, ಹೃದಯವು ಮೂರು ಕೋಣೆಗಳನ್ನು ಹೊಂದಿದ್ದು, 12 ಜೋಡಿ ಕಪಾಲದ ನರಗಳಿವೆ. ಅಗ್ರದಂತಿ, 1 ಜೊತೆ ಸಂಭೋಗಿಸುವ ಅಂಗಗಳು ಮತ್ತು ಮೊನಚಾದ ಶಲ್ಕಗಳನ್ನು ಹೊರ ಚರ್ಮವು ಹೊಂದಿರುವುದರಿಂದ Squamata ದರ್ಜೆಗೆ ಸೇರಿಸಿ, ದೇಹದ ಬಣ್ಣವನ್ನು ಬದಲಿಸುವುದರಿಂದ Chamaeleonidae ಕುಟುಂಬಕ್ಕೆ ಸೇರಿಸಿದ್ದಾರೆ.

ಇವು ಶಾಖಾವಾಸಿ ಪ್ರಾಣಿಗಳಾಗಿದ್ದು, ಮರವಾಸಿ ಪ್ರಾಣಿಗಳಾಗಿವೆ. ಇವು ಆಫ್ರಿಕಾ, ಮಡಗಾಸ್ಕರ, ಅರೇಬಿಯಾ, ಯುರೋಪ ದಕ್ಷಿಣ ಭಾರತ ಮತ್ತು ಶ್ರೀಲಂಕಾದಲ್ಲಿ ಕಂಡು ಬರುತ್ತವೆ. ಕೆಮೆಲಿಯಾನ್ ಜಿಲಾನಿಕಸ (Chameleon zelanicus) ಎಂಬ ಉಸರವಳ್ಳಿಯು ಭಾರತದಲ್ಲಿ ಕಂಡು ಬರುತ್ತದೆ.

ಇಡೀ ಜಗತ್ತಿನಲಿ 171 ಜಾತಿಯ ಉಸರವಳ್ಳಿಗಳಿದ್ದು, ಇವು ಮಳೆ ಇಲ್ಲದ ಪ್ರದೇಶದಲ್ಲಿ ವಾಸಿಸುತ್ತವೆ.

ಈ ಉಸರವಳ್ಳಿಯ ದೇಹದ ಉದ್ದಳತೆ 15 ಮಿ.ಮೀ (0.59 ಇಂಚು) ನಿಂದ ಹಿಡಿದು 68.5 ಸೆಂ.ಮೀ (27 ಇಂಚು ವಿನಷ್ಟು) ಇದೆ. ಅತೀ ಚಿಕ್ಕದಾದ ಉಸರವಳ್ಳಿಯ ಹೆಸರು ಬ್ರೊಕೆಸಿಯಾ ಮಿಕ್ರಾ (Brookesia micra) ಹಾಗೂ ಅತೀ ದೊಡ್ಡದಾದ ಉಸರವಳ್ಳಿಯ ಹೆಸರು ಕ್ಯಾಲುಮ್ಮಾ ಪಾರಸೋನಿ (Calumma parsonii).

ಉಸರವಳ್ಳಿ ದೇಹ ಪಕ್ಕದಿಂದ ಪಕ್ಕಕ್ಕೆ ಒತ್ತಿದಂತೆ ಚಪ್ಪಟೆಯಾಗಿದ್ದು, ತಲೆ ತ್ರಿಕೋನಾಕಾರವಿದೆ. ತಲೆಯ ಮೇಲೆ ಶಂಕುವಿನಾಕಾರದ ಶಿಖೆ ಇದೆ. ತಾವು ಓಡಾಡುವ ಮುನ್ನ ಅಡ್ಡಿಯಾಗಿ ಬರುವ ಎಲೆಗಳನ್ನು ರೆಂಬೆಗಳನ್ನು ಅತ್ತಿತ್ತ ಸರಿಸಿ ತಮ್ಮ ನೋಟದ ಹಾದಿಯನ್ನು ಸುಗಮಗೊಳಿಸಿಕೊಳ್ಳಲು ಈ ಶಿಖೆಯನ್ನು ಉಪಯೋಗಿಸುತ್ತವೆ. ಇವುಗಳಿಗೆ ವಿಶೇಷವಾದ ನಾಲಿಗೆಯಿದ್ದು, ಅದು ಸ್ಥಿತಿಸ್ತಾಪಕ ಶಕ್ತಿಯನ್ನು ಹೊಂದಿದೆ. ಅದನ್ನು ಬಾಯಿಯಿಂದ ಹೊರಕ್ಕೆ ಒಂದು ಅಡಿಯಷ್ಟು ಚಾಚಬಲ್ಲವು ಹಾಗೂ ನಾಲಿಗೆಯ ತುದಿಯು ಅಂಟುಗುಣದ ಗದೆಯಾಕಾರವನ್ನು ಹೊಂದಿದೆ.

ಚಿತ್ರ ಕೃಪೆ: ವಿವಾನ್ ಪದಕಿ

ಯಾವಾಗ ಆಹಾರ ಜೀವಿಗಳು ಈ ಉಸರವಳ್ಳಿ ದೃಷ್ಟಿಗೆ ಬಿಳುತ್ತವೆಯೋ ಆವಾಗ ನಾಲಿಗೆಯನ್ನು ತಕ್ಷಣ ಹೊರಕ್ಕೆಸೆದು ನಾಲಿಗೆಯ ತುದಿಗೆ ಆಹಾರ ಜೀವಿಯು ಅಂಟಿಕೊಂಡ ತಕ್ಷಣ ನಾಲಿಗೆಯನ್ನು ಆಹಾರ ಜೀವಿಯೊಂದಿಗೆ ಬಾಯೊಳಕ್ಕೆ ಎಳೆಯುತ್ತದೆ. ಇವು ಸರ್ವಭಕ್ಷಕ ಪ್ರಾಣಿಗಳಾಗಿದ್ದು ಹೆಚ್ಚಾಗಿ ಕೀಟಹಾರಿ ಪ್ರಾಣಿಗಳಾಗಿವೆ. ಇವು ಪಾತರಗಿತ್ತಿ, ಇರುವೆ, ಕಣಜ ಹುಳು, ಬಸವನ ಹುಳು, ಜೀರುಂಡೆ ಹಾಗೂ ಸಣ್ಣ ಕಪ್ಪೆಗಳನ್ನು ತಿನ್ನುತ್ತವೆ.

ಇದರ ಕಣ್ಣುಗಳು ದೊಡ್ಡವು, ಕಣ್ಣಿನ ಪಾಪೆ ಮಾತ್ರ ಕಾಣುವಂತೆ ಒಂದು ಸಣ್ಣ ರಂಧ್ರ ಬಿಟ್ಟು ಉಳಿದೆಲ್ಲ ಭಾಗವು ಹುರುಪೆಗಳಿಂದ ಕೂಡಿದೆ. ಇವು ತಮ್ಮ ಬಲ ಮತ್ತು ಎಡ ಕಣ್ಣುಗಳನ್ನು ಪ್ರತ್ಯೇಕವಾಗಿ 360 ಡಿಗ್ರಿ ತಿರುಗಿಸಿ ತಮ್ಮ ಸುತ್ತಮುತ್ತಲಿನ ಪ್ರದೇಶವನ್ನು ವಿಕ್ಷಿಸುತ್ತವೆ. ಇವುಗಳಿಗೆ ಕಿವಿ ತಮಟೆ ಇಲ್ಲ.

ಚಿತ್ರ ಕೃಪೆ: ವಿವಾನ್ ಪದಕಿ

ಊಸರವಳ್ಳಿಯ ಪ್ರತಿಯೊಂದು ಕಾಲಿನಲ್ಲಿ 5 ಬೆರಳುಗಳಿದ್ದು, ಅದರಲಿ ಬೆರಳುಗಳು ಜೊತೆಯಾಗಿ ಮುಂದಕ್ಕೆ ಇದ್ದರೆ, 2 ಜೊತೆ ಬೆರಳುಗಳು ಹಿಂದಕ್ಕೆ ಇದೆ. ಇದನ್ನು ನಾವು ಜೈಗೊಡಬಲಸ್ (Zygodactylous) ಪಾದವೆಂದು ಕರೆಯುತ್ತೇವೆ. ಮರ ಗಿಡಗಳನ್ನು ಹತ್ತಲಿಕ್ಕೆಂದು ಕಾಲುಗಳನ್ನು ಉಪಯೋಗಿಸುತ್ತವೆ.

ಇದರ ಬಾಲವು ಪ್ರಿಹೆನಸ್ಟೈಲ್ (Prehensile) ತರಹವಿದ್ದು, ಬಾಲವನ್ನು ಗಿಡಗಳ ರೆಂಬೆಗಳಿಗೆ ಸುತ್ತಿಕೊಂಡು ಪರಿಗ್ರಾಹಿ ಲಕ್ಷಣವನ್ನು ತೊರುತ್ತದೆ.

ಬೆಳಕು, ಉಷ್ಣತೆ, ಉದ್ವೇಗ ಪರಿಸ್ಥಿತಿಗಳ ಪ್ರಚೋದನೆಯಲ್ಲಿ ಊಸರವಳ್ಳಿಗಳು ವೇಗವಾಗಿ ದೇಹದ ಬಣ್ಣವನ್ನು ಬದಲಿಸುತ್ತವೆ. ಇವುಗಳು ಗುಲಾಬಿ, ನೀಲಿ, ಕೆಂಪು, ಕೇಸರಿ, ಹಸಿರು, ಕಪ್ಪು, ಕಂದು, ತೀಳಿ ನೀಲಿ, ಹಳದಿ ಹಾಗೂ ನೇರಳೆ ಬಣ್ಣಗಳ ಮೂಲಕ ತಮ್ಮ ದೇಹದ ಬಣ್ಣವನ್ನು ಬದಲಾವಣೆ ಮಾಡುತ್ತವೆ. ಇದರ ಜೊತೆಗೆ ಶತ್ರುವಿನಿಂದ ಪಾರಾಗಲು ಹಾಗೂ ತಮ್ಮ ಸಂಕೇತಗಳನ್ನು ಸೂಚಿಸಲು ದೇಹದ ಬಣ್ಣವನ್ನು ಬದಲಾವಣೆ ಮಾಡುತ್ತವೆ.

ಊಸರವಳ್ಳಿಗಳು ಚರ್ಮದಲ್ಲಿ 2 ವರ್ಣದ್ರವ್ಯದ ಪದರುಗಳಿವೆ. ಅವುಗಳು ಯಾವುದೆಂದರೇ ವರ್ಣಾಂಗಕ (Chromatophore layer) (Melanophore layer) .

ವರ್ಣಾಂಗಕ (Chromatophore layer) ಪದರು ಹಳದಿ ಮತ್ತು ಕೆಂಪು ವರ್ಣದ್ರವ್ಯವನ್ನು ಹೊಂದಿದೆ. ಕೃಷ್ಣವರ್ಣಧಾರಕ

ಚಿತ್ರ ಕೃಪೆ: ವಿವಾನ್ ಪದಕಿ

(Melanophore layer) ಪದರು ಕಪ್ಪು ವರ್ಣದ್ರವ್ಯವನ್ನು ಹೊಂದಿದ್ದು, ಕಂದು ಮತ್ತು ನೀಲಿ ಬಣ್ಣಗಳನ್ನು ಪ್ರತಿಬಿಂಬಿಸುತ್ತದೆ. ಸಾಮಾನ್ಯವಾಗಿ ಬಹಳಷ್ಟು ಊಸರವಳ್ಳಿಗಳು ಶಾಂತವಿದ್ದಾಗ ಅವುಗಳ ದೇಹದ ಬಣ್ಣ ಹಸಿರಾಗಿರುತ್ತದೆ. ಈ ವರ್ಣದ್ರವ್ಯದ ಪದರುಗಳಲ್ಲಿ ಗ್ವಾನಿನ್ (Guanine Crystals) ಹರಳುಗಳಿವೆ. ಗ್ವಾನಿನ್ ಹರಳುಗಳ ನಡುವಿನ ಜಾಗವನ್ನು ಬದಲಾವಣೆ ಮಾಡಿ, ಕೇವಲ 20 ಸೆಕೆಂಡುಗಳಲ್ಲಿ ಬಣ್ಣವನ್ನು ಬದಲಿಸುತ್ತವೆ.

ಯುವ ಊಸರವಳ್ಳಿಗಳು ತಮ್ಮ ಹಳೆಯ ಚರ್ಮವನ್ನು ಪ್ರತಿ 3 ರಿಂದ 4 ವಾರಕ್ಕೊಮ್ಮೆ ಉದುರಿಸಿದರೆ....! ವಯಸ್ಸಾದ ಊಸರವಳ್ಳಿಗಳು ತಮ್ಮ ಹಳೆಯ ಚರ್ಮವನ್ನು 2 ತಿಂಗಳಿಗೊಮ್ಮೆ ಉದುರಿಸುತ್ತವೆ.

ಇವುಗಳ ಸಂತಾನೋತ್ಪತ್ತಿ ಬಗ್ಗೆ ಹೇಳಬೇಕೆಂದರೆ ಅಂತರ ಲಿಂಗೀಯ ಜೊತೆ ಸಂವಹನ ಕ್ರಿಯೆಯಲ್ಲಿ ತೊಡಗಿಕೊಳ್ಳುವುದಕ್ಕೆ ವಿಶೇಷವಾದ ದೃಶ್ಯ ಪ್ರದರ್ಶನಗಳನ್ನು ಮಾಡುತ್ತವೆ. ಪ್ರಣಯ ಕ್ರಿಯೆಯಲ್ಲಿ ಗಂಡು, ಹೆಣ್ಣನ್ನು ಆಕರ್ಷಿಸಲು ತನ್ನ ತಲೆಯನ್ನು ಸುತ್ತಿಸುತ್ತದೆ ಹಾಗೂ ಹೆಣ್ಣಿನ ಗದ್ದವನ್ನು ತಿಕ್ಕುತ್ತದೆ.

ಯಾವಾಗ ಹೆಣ್ಣು ಉಸರವಳ್ಳಿಗೆ ತನಗೆ ಮರಿಗಳು ಬೇಕೆನಿಸುತ್ತದೆಯೋ ಹಾಗೂ ತಮ್ಮ ವಂಶವನ್ನು ವೃದ್ಧಿಬೇಕೆನಿಸುತ್ತದೆಯೋ ಆವಾಗ ಹೆಣ್ಣು ತನ್ನ ದೇಹದ ಬಣ್ಣವನ್ನು ಬದಲಾವಣೆ ಮಾಡುತ್ತದೆ. ಈ ಸಮಯದಲ್ಲಿ ಗಂಡು ಅತೀ ಹೆಚ್ಚು ಪ್ರಣಯಕ್ರಿಯೆಯನ್ನು ನಡೆಸುತ್ತದೆ. ಆಮೇಲೆ ಹೆಣ್ಣು ಗಂಡುಗಳು ಸಂಧಿಸಿ (Mating) ಸಂಭೋಗ ನಡೆಸುತ್ತವೆ.

ಕೆಲವು ಉಸರವಳ್ಳಿಗಳು ಮೊಟ್ಟೆಯನ್ನಿಟ್ಟರೆ ಇನ್ನೂ ಕೆಲವು ಉಸರವಳ್ಳಿಗಳು ದೇಹದಲ್ಲೇ ಮೊಟ್ಟೆಯನ್ನಿಟ್ಟು ಕೆಲವು ದಿನ ಕಾವು ಕೊಟ್ಟು ಆಮೇಲೆ ಮೊಟ್ಟೆಯೊಡೆದು ನೇರವಾಗಿ ಮರಿಗಳನ್ನು ದೇಹದಿಂದ ಹೊರಬರುತ್ತವೆ. ಮೊಟ್ಟೆಯು ದೇಹದಿಂದ ನೇರವಾಗಿ ಹೊರಕ್ಕೆ ಬರುವುದನ್ನು ನಾವು ಓವಿಪ್ಯಾರಸ (Oviparous) ಎಂದು ಕರೆಯುತ್ತೇವೆ.

ಮೊಟ್ಟೆಯು ದೇಹದಲ್ಲಿಯೇ ಒಡದು ದೇಹದಿಂದ ನೇರವಾಗಿ ಮರಿಗಳಾಗಿ ಹೊರಬರುವುದನ್ನು ನಾವು ಓವೋವಿವಿಪ್ಯಾರಸ್ (Ovoviviparous) ಎಂದು ಕರೆಯುತ್ತೇವೆ.

ಮೊಟ್ಟೆ ಇಡುವ ಕಾಲಕ್ಕೆ ಹೆಣ್ಣು ಉಸರವಳ್ಳಿ ಮರಗಳಿಂದ ಕೆಳಕ್ಕಿಳಿದು ತನ್ನ ಮುಂಗಾಲನ್ನು ಉಪಯೋಗಿಸಿ ನೆಲದಲ್ಲಿ 30 ಸೆಂ.ಮೀ ಆಳದ ಗುಂಡಿಯನ್ನು ತೋಡಿ ಒಂದೇ ಬಾರಿಗೆ 22 ರಿಂದ 30 ಮೊಟ್ಟೆಯನ್ನಿಡುತ್ತದೆ. ಮೊಟ್ಟೆಗಳು 16 ಮಿ.ಮೀ ಉದ್ದವಿರುತ್ತವೆ. 120 ದಿನಗಳಿಂದ 720 ದಿನಗಳ ಕಾವು ಕಾಲದನಂತರ ಮರಿಗಳು ಹೊರಬರುತ್ತವೆ. ಇವಗಳ ಜೀವಿತಾವಧಿ 5 ರಿಂದ 10 ವರ್ಷ.

ಶ್ರೀ ನವೀನ ಪ್ಯಾಟಿಮನಿ
ಟ್ಯಾಕ್ಸಿಡರ್ಮಿಸ್ಟ
ಪ್ರಾದೇಶಿಕ ಪ್ರಾಕೃತಿಕ ನೈಸರ್ಗಿಕ ಇತಿಹಾಸ ವಸ್ತುಸಂಗ್ರಹಾಲಯ, ಮೈಸೂರು.
ಇಮೇಲ್:-naveenpyatimani9901@gmail.com